## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಪಂಚಾಯತ್ ರಾಜ್ ಯೋಜನೆಗಳ ಬಗ್ಗೆ ಚರ್ಚಿಸಲು ಉಪಾಧ್ಯಕ್ಷರು, ನೀತಿ ಆಯೋಗ ರವರ ಅಧ್ಯಕ್ಷತೆಯಲ್ಲಿನ ಸಮಿತಿ ಸಭೆಗೆ ರಾಜ್ಯದಿಂದ ಪ್ರತಿನಿಧಿಸಲು ಗ್ರಾಮ ಪಂಚಾಯತಿ ಅಧ್ಯಕ್ಷರನ್ನು ನಿಯೋಜಿಸುವ ಬಗ್ಗೆ.

**ಓದಲಾಗಿದೆ:**
1) ಜಂಟಿ ಕಾರ್ಯದರ್ಶಿ, ಪಂಚಾಯತ್ ರಾಜ್ ಮಂತ್ರಾಲಯ, ಭಾರತ ಸರ್ಕಾರ ರವರ ಅ.ಅ.ಪತ್ರ ಸಂಖ್ಯೆ: M-11015/309/2016-PB, dated 30.12.2016 ಮತ್ತು 03.01.2017
2) ಸರ್ಕಾರದ ಇದೇ ಸಮ ಸಂಖ್ಯೆಯ ಪತ್ರ ದಿನಾಂಕ: 07.01.2017

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ ಕೇಂದ್ರ ಪಂಚಾಯತ್ ರಾಜ್ ಮಂತ್ರಾಲಯದ ಯೋಜನೆಗಳ ಪರಿಶೀಲನೆ ಹಾಗೂ ಹೊಸದಾಗಿ ಮನರಚಿಸಲಾದ 'ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ' ಯೋಜನೆಯ ಪ್ರಸ್ತಾವನೆಯ ಬಗ್ಗೆ ಚರ್ಚಿಸಲು ಉಪಾಧ್ಯಕ್ಷರು, ನೀತಿ ಆಯೋಗ ರವರ ಅಧ್ಯಕ್ಷತೆಯಲ್ಲಿ ದಿನಾಂಕ 12.01.2017 ರಂದು ಮಧ್ಯಾಹ್ನ 03.00 ರಿಂದ 04.00 ರವರೆಗೆ ಸಮಿತಿ ಕೊಠಡಿ(ಕೊಠಡಿ ಸಂಖ್ಯೆ 122), ನೀತಿ ಆಯೋಗ, ಸಂಸತ್ ಬೀದಿ, ನವದೆಹಲಿ ಇಲ್ಲಿ ನಡೆಯುತ್ತಿರುವ ಸಮಿತಿ ಸಭೆಗೆ ಗ್ರಾಮ ಪಂಚಾಯತಿ ಅಧ್ಯಕ್ಷರನ್ನು ನಿಯೋಜಿಸುವಂತೆ ಜಂಟಿ ಕಾರ್ಯದರ್ಶಿ, ಪಂಚಾಯತ್ ರಾಜ್ ಮಂತ್ರಾಲಯ, ಭಾರತ ಸರ್ಕಾರ ರವರು ಕೋರಿರುತ್ತಾರೆ.

ಕರ್ನಾಟಕ ರಾಜ್ಯದ ವತಿಯಿಂದ ಸದರಿ ಸಭೆಯಲ್ಲಿ ಹಾಜರಾಗಿ ಕೇಂದ್ರ ಪಂಚಾಯತ್ ರಾಜ್ ಮಂತ್ರಾಲಯದ ಯೋಜನೆಗಳ ಪರಿಶೀಲನೆ ಹಾಗೂ ಹೊಸದಾಗಿ ಮನರಚಿಸಲಾದ 'ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ' ಯೋಜನೆಯ ಪ್ರಸ್ತಾವನೆಯ ಬಗ್ಗೆ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನ ರೆಡ್ಡೇರನಾಗನೂರ ಗ್ರಾಮ ಪಂಚಾಯತಿ ಅಧ್ಯಕ್ಷರನ್ನು ನಿಯೋಜಿಸಲು ಸರ್ಕಾರವು ನಿರ್ಧರಿಸಿದೆ. ಅದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 07 ಗ್ರಾಪಂಅ 2017, ಬೆಂಗಳೂರು, ದಿನಾಂಕ 10.01.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೇಂದ್ರ ಪಂಚಾಯತ್ ರಾಜ್ ಮಂತ್ರಾಲಯದ ಯೋಜನೆಗಳ ಪರಿಶೀಲನೆ ಹಾಗೂ ಹೊಸದಾಗಿ ಮನರಚಿಸಲಾದ 'ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ' ಯೋಜನೆಯ ಪ್ರಸ್ತಾವನೆಯ ಬಗ್ಗೆ ಚರ್ಚಿಸಲು ಉಪಾಧ್ಯಕ್ಷರು, ನೀತಿ ಆಯೋಗ ರವರ ಅಧ್ಯಕ್ಷತೆಯಲ್ಲಿ ದಿನಾಂಕ 12.01.2017 ರಂದು ಮಧ್ಯಾಹ್ನ 03.00 ರಿಂದ 04.00 ರವರೆಗೆ ಸಮಿತಿ ಕೊಠಡಿ(ಕೊಠಡಿ ಸಂಖ್ಯೆ 122), ನೀತಿ ಆಯೋಗ, ಸಂಸತ್ ಬೀದಿ, ನವದೆಹಲಿ ಇಲ್ಲಿ ನಡೆಯುತ್ತಿರುವ ಸಮಿತಿ ಸಭೆಗೆ ಶ್ರೀಮತಿ ಪ್ರೇಮಾ ಮಲ್ಲನಗೌಡ ತಿಮ್ಮನಗೌಡರ್, ಅಧ್ಯಕ್ಷರು, ರೆಡ್ಡೇರ ನಾಗನೂರ ಗ್ರಾಮ ಪಂಚಾಯತಿ, ನರಗುಂದ ತಾಲ್ಲೂಕು, ಗದಗ ಜಿಲ್ಲೆ (ಮೊಬೈಲ್ ಸಂಖ್ಯೆ: 9972519879) ಇವರನ್ನು ನಿಯೋಜಿಸಿ ಆದೇಶಿಸಿದೆ.

ಸದರಿ ಸಭೆಯ ಬಗ್ಗೆ ಮೇಲೆ ತಿಳಿಸಿದ ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಗ್ರಾಮ ಪಂಚಾಯತಿ ಉಪಾಧ್ಯಕ್ಷರುಗಳಿಗೆ ಮಾಹಿತಿ ನೀಡಿ, ಸದರಿಯವರು ಸಭೆಗೆ ತಪ್ಪದೇ ಹಾಜರಾಗಲು ಅಗತ್ಯ ಕ್ರಮವಹಿಸುವಂತೆ ಹಾಗೂ ಅವರುಗಳ ಸ್ಥಳಗಳಿಂದ ಬೆಂಗಳೂರಿನ ವಿಮಾನ ನಿಲ್ದಾಣಕ್ಕೆ ಮತ್ತು ಬೆಂಗಳೂರಿನ ವಿಮಾನ ನಿಲ್ದಾಣದಿಂದ ಅವರುಗಳ ಸ್ಥಳಗಳಿಗೆ ತೆರಳಲು ವಾಹನ ವ್ಯವಸ್ಥೆಯನ್ನು ಮಾಡಲು ಗದಗ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅಗತ್ಯ ಕ್ರಮವಹಿಸುವುದು ಹಾಗೂ ಈ ವೆಚ್ಚವನ್ನು ಸದರಿ ಗ್ರಾಮ ಪಂಚಾಯತಿಯ ನಿಧಿಯಿಂದ ಭರಿಸುವುದು.

*ಮುಂದಿನ ಪುಟಕ್ಕೆ...*

ಸದರಿ ಸಭೆಗೆ ನಿಯೋಜಿಸಿದ ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಗ್ರಾಮ ಪಂಚಾಯತಿ ಉಪಾಧ್ಯಕ್ಷರು ಬೆಂಗಳೂರಿನಿಂದ ನವದೆಹಲಿಗೆ ತೆರಳಲು ವಿಮಾನ ಮೂಲಕ ಪ್ರಯಾಣ ವ್ಯವಸ್ಥೆ ಹಾಗೂ ನವದೆಹಲಿಯ ಕರ್ನಾಟಕ ಭವನದಲ್ಲಿ ತಂಗಲು ಅಗತ್ಯ ವ್ಯವಸ್ಥೆಗಳನ್ನು ಮಾಡಿ, ಸದರಿ ವೆಚ್ಚವನ್ನು ಕರ್ನಾಟಕ ಪಂಚಾಯತ್ ರಾಜ್(ಯೋಜನೆ) ಲೆಕ್ಕ ಶೀರ್ಷಿಕೆ **2515-00-101-0-09-103** ರಡಿ ವೆಚ್ಚ ಭರಿಸಲು ನಿರ್ದೇಶಕರು(ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಅಗತ್ಯ ಕ್ರಮವಹಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಟಿ.ವಿ.ಅರುಣ್ ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಯನ್ನು:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3. ನಿರ್ದೇಶಕರು(ಪಂಚಾಯತ್ ರಾಜ್-2), ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ ಇವರಿಗೆ ಅಗತ್ಯ ಕ್ರಮಕ್ಕಾಗಿ.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಗದಗ ಜಿಲ್ಲಾ ಪಂಚಾಯತಿ, ಗದಗ.
5. ಕಾರ್ಯನಿರ್ವಾಹಕ ಅಧಿಕಾರಿಗಳು, ನರಗುಂದ ತಾಲ್ಲೂಕು ಪಂಚಾಯತಿ, ನರಗುಂದ, ಗದಗ ಜಿಲ್ಲೆ.
6. ಶ್ರೀಮತಿ ಪ್ರೇಮಾ ಮಲ್ಲನಗೌಡ ತಿಮ್ಮನಗೌಡ್ರ, ಅಧ್ಯಕ್ಷರು, ರೆಡ್ಡೇರ ನಾಗನೂರ ಗ್ರಾಮ ಪಂಚಾಯತಿ, ನರಗುಂದ ತಾಲ್ಲೂಕು, ಗದಗ ಜಿಲ್ಲೆ.
7. ಪಂಚಾಯತಿ ಅಭಿವೃದ್ಧಿ ಅಧಿಕಾರಿ, ರೆಡ್ಡೇರ ನಾಗನೂರ ಗ್ರಾಮ ಪಂಚಾಯತಿ, ನರಗುಂದ ತಾ., ಗದಗ ಜಿಲ್ಲೆ.
8. ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
9. ಹೆಚ್ಚುವರಿ ಪ್ರತಿ.

**ಪ್ರತಿಯನ್ನು ಮಾಹಿತಿಗಾಗಿ :**

1) ಮಾನ್ಯ ಗ್ರಾ.ಅ. ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.